(ಇಂದು ದಿನಾಂಕಃ 07–08–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

<u>ಮಧ್ಯಂತರ ಅರ್ಜಿ ಸಂಖ್ಯೆ **10** ರ ಆದೇಶದ ಮೇರೆಗೆ ಪಾಟೀಸವಾಲು ಃ ಶ್ರೀ ಎನ್ ವೈ ಹೆಚ್ ವಕೀಲರಿಂದ ಃ-</u>

1) ನಾನು ನಗರಸಭೆಯ ನಿವೃತ್ತ ನೌಕರ ಇರುತ್ತೇನೆ. ನಾನು ಗದಗ–ಬೇಟಗೇರಿಯ ಖಾಯಂ ನಿವಾಸಿಯಾಗಿರುತ್ತೇನೆ. ದಾವಾ ಆಸ್ತಿಗಳು ಅಣ್ಣಿಗೇರಿಯಲ್ಲಿ ಇರುತ್ತವೆ. ನನ್ನ ಶಾಲಾ ದಾಖಲಾತಿಗಳನ್ನು ನಾನು ನ್ಯಾಯಾಲಯದಲ್ಲಿ ಹಾಜರು ಪಡಿಸಿಲ್ಲ. ಸದರಿ ದಾಖಲೆಗಳನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇಲ್ಲಾ. ನನ್ನ ಶಿಕ್ಷಣವು ಗದಗ ಜಿಲ್ಲೆಯಲ್ಲಿ ಆಗಿರುತ್ತದೆ.

2) ಸಾಕ್ಷಿಗೆ ಈಗ ನಿಪಿ–5 ನ್ನು ತೋರಿಸಿ ಅದು ಯಲ್ಲಪ್ಪ ಉಣಕಲ್ ರವರ ಮರಣ ಪ್ರಮಾಣ ಪತ್ರ ಎಂದರೆ ಸರಿ. ಅದರ 7 ನೇ ಕಂಡಿಕೆಯಲ್ಲಿ ಹೆಂಡತಿಯ ಹೆಸರು ಕಾಣಿಸಿಲ್ಲ ಎಂದರೆ ಸರಿ. ಅದರಲ್ಲಿ ಮೃತರ ಖಾಯಂ ವಿಳಾಸ ಅಣ್ಣಿಗೇರಿ ಎಂದು ನಮೂದು ಇರುತ್ತದೆ ಎಂದರೆ ಸರಿ. ನಿಪಿ–7 ಬೆಟಗೇರಿ ಗ್ರಾಮಕ್ಕೆ ಸೇರಿದ ಪತ್ರ ಎಂದರೆ ಸರಿ. ಯಲ್ಲಪ್ಪ ಅಣ್ಣಿಗೇರಿ ರವರು ಅಣ್ಣಿಗೇರಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಯಲ್ಲಪ್ಪ ಅಣ್ಣಿಗೇರಿ @ ಉಣಕಲ್ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ವ್ಯಕ್ತಿಯು ಮರಣ ಹೊಂದಿದ ಸ್ಥಳದಲ್ಲಿ ನ್ಯಾಯಾವ್ಯಾಪ್ತಿ ಹೊಂದಿದ ಅಧಿಕಾರಿಗಳು ವಾರಸಾ ಪ್ರಮಾಣ ಪತ್ರವನ್ನು ಸ್ಥಳ ಚೌಕಾಸಿ ಮಾಡಿ ನೀಡುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ತಂದೆಯವರು ಬೇಟಗೇರಿ ಹಾಗೂ ಅಣ್ಣಿಗೇರಿ ಎರಡೂಕಡೆ ಇರುತ್ತಿದ್ದರು.

3) ಅಣ್ಣಿಗೇರಿಯಲ್ಲಿ ಯಲ್ಲಪ್ಪ ಉಣಕಲ್ ರವರ ವಾರಸಾ ಪ್ರಮಾಣ ಪತ್ರ ಕೋರಿ ಅರ್ಜಿ ಸಲ್ಲಿಸಿಲ್ಲ ಎಂದರೆ ಸರಿ. ಯಲ್ಲಪ್ಪ ಉಣಕಲ್ ರವರು ಖಾಯಂ ಆಗಿ ಅಣ್ಣಿಗೇರಿಯಲ್ಲಿ ವಾಸವಿದ್ದು ಅಲ್ಲಿಯ ಕಂದಾಯ ಅಧಿಕಾರಿಗಳಿಗೆ ಅವರ ಬಗ್ಗೆ ಸಂಪೂರ್ಣ ಮಾಹಿತಿ ಇರುತ್ತದೆ ಎಂದು ನಾನು ಅರ್ಜಿ ಸಲ್ಲಿಸಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗಳು ಪ್ರತಿವಾದಿಯ ಹೆಸರಿನಲ್ಲಿ ಹಾಗೂ ಕಬ್ಜೆಯಲ್ಲಿ ಇರುತ್ತದೆ ಎಂದರೆ ಸರಿಯಲ್ಲ. ಸದರಿ ದಾವಾ ಆಸ್ತಿಗಳಲ್ಲಿ ಕಂದಾಯ ಅಧಿಕಾರಿಗಳು ಪರಿಶೀಲನೆ ಮಾಡಿ ಹೆಸರನ್ನು ನಮೂದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಲು ನಾನೇ ಮಾಹಿತಿಯನ್ನು ನೀಡಿರುತ್ತೇನೆ.

4) ಅಸಲು ದಾವಾ ಸಂಖ್ಯೆ 128/2014 ರ ಆದೇಶ ಹಾಗೂ ತೀರ್ಪಿನ ಪ್ರತಿಗಳನ್ನು ಸಲ್ಲಿಸಿಲ್ಲ. ಅಸಲು ದಾವಾ ಸಂಖ್ಯೆ 128/2014 ರಲ್ಲಿ ಯಲ್ಲಪ್ಪ ರವರ ಮರಣದ ನಂತರ ಪ್ರತಿವಾದಿಯರು ದಾವೆ ಸಲ್ಲಿಸಿ ರಾಜೀ ಆಗಿ ಪಾಲುವಿಭಾಗ ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನಾನು ಅದನ್ನೆ ಪ್ರಶ್ನಿಸಿರುತ್ತೇನೆ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 128/2014 ರಲ್ಲಿಯ ರಾಜೀ ಅರ್ಜಿಯನ್ನು ನೋಡಿರುತ್ತೇನೆ. ಅಸಲು ದಾವಾ ಸಂಖ್ಯೆ 128/2014 ರಲ್ಲಿಯ ದಾಖಲೆಗಳ ದೃಡಿಕೃತ ಪ್ರತಿ ಪಡೆದುಕೊಂಡ ಬಗ್ಗೆ ಕೇಳಲಾಗಿ ಸಾಕ್ಷಿಯು ತಮ್ಮ ಎದುರುಗಡೆ ಕುಳಿತಿರುವ ವಕೀಲರ ಬಳಿ ವಿಚಾರ ಮಾಡಿ ಪಡೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ಸದರಿ ದಾವೆಯ ದಾಖಲೆಗಳನ್ನು ಹಾಜರು ಪಡಿಸದೇ ದಾವೆಯ ವ್ಯಾಪ್ತಿಯ ಬಗ್ಗೆ ಪ್ರಶ್ನೆ ಮಾಡಲು ಬರುವುದಿಲ್ಲ ಎಂದರೆ ಸಾಕ್ಷಿಯು ಹಾಜರು ಪಡಿಸುತ್ತೇನೆ ಎಂದು ನುಡಿಯುತ್ತಾರೆ. ಅಸಲು ದಾವಾ ಸಂಖ್ಯೆ 128/2014 ಯಾವ ನ್ಯಾಯಾಲಯದ ನ್ಯಾಯಾವ್ಯಾಪ್ತಿ ಎಂದು ತೋರಿಸಿಲ್ಲ ಎಂದರೆ ಸರಿ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು, ಸಮಯವಕಾಶ ನೀಡಲಾಯಿತು.

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)
**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**
**ನವಲಗುಂದ.**